ಶ್ರೀ ಗೋಪಾಲ ಸಾಲೆನ್ನ.—9 ಹೆಲ್ತ್ ಸೆಂಟರುಗಳಲ್ಲಿ ಡಾಕ್ಟರುಗಳಿಲ್ಲ ಎಂದು ಹೇಳುತ್ತಿರುವಾಗ 1 ಲಕ್ಷ 39 ಸಾವಿರ ಚಿಲ್ಲರೆ ಹಣ ಹೇಗೆ ಖರ್ಚಾಯಿತು ಎಂದು ಹೇಳುತ್ತೀರಿ?

ಶ್ರೀ ಕೆ. ನಾಗಪ್ಪ ಆಳ್ವ.—ಖಾಲಿ ಇದ್ದ 9 ಸ್ಥಾನಗಳಲ್ಲಿ 4 ಸ್ಥಾನಗಳನ್ನು ಭರ್ತಿಮಾಡಲಾಗಿದೆ. ಡಾಕ್ಟರುಗಳಿಲ್ಲದಿದ್ದರೆ ಬೇರೆ ಸಿಬ್ಬಂದಿ ಇದ್ದೇ ಇರುತ್ತದೆ, ಅದಕ್ಕೆ ಹಣ ಖರ್ಚಾಗಿಯೇ ಆಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—1961ರಿಂದ ಖಾಲಿಯಿದ್ದ ಸ್ಥಾನಗಳಲ್ಲಿ ಡಾಕ್ಟರುಗಳನ್ನು ಯಾವಾಗ ಭರ್ತಿ ಮಾಡಲಾಯಿತು?

ಶ್ರೀ ಕೆ. ನಾಗಪ್ಪ ಆಳ್ವ.—ಪ್ರತಿಯೊಂದು ದೊಡ್ಡ ಆಸ್ಪತ್ರೆಯಲ್ಲೂ ಇರತಕ್ಕ ಸಿಬ್ಬಂದಿಯನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡಿ ಕೆಲವು ಸ್ಥಾನಗಳನ್ನು ಭರ್ತಿಮಾಡಲಾಗಿದೆ. ಅವರೇಜಿನಲ್ಲಿ ಈಗ 9 ಜನ ಡಾಕ್ಟರುಗಳು ಕಡಮೆ ಇದ್ದಾರೆ.

ಶ್ರೀ ಎ. ಕೃಷ್ಣಪ್ಪ ಶೆಟ್ಟಿ.—ಆಸ್ಪತ್ರೆಗಳಲ್ಲಿ ಡಾಕ್ಟರೆ ಇಲ್ಲದಿರುವುದರಿಂದ ರೋಗಿಗಳು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆಂಬುದಾಗಿ ಕಂಡುಬರುವುದಿಲ್ಲವೆ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ತಮ್ಮ ಅಭಿಪ್ರಾಯ ಆಗಿರಬಹುದು.

Major and Minor Tanks and Bandharas in Haliyal, Ankola Taluk, North Kanara District.

*Q.—589. Sri S. P. PHAYDE (Ankola).—

Will the Government be pleased to state:—

(*a*) the total number of major and minor tanks and Bandharas in Haliyal, Ankola Taluk, North Kanara District.

(*b*) of them, how many require repairs.

(*c*) the amount allotted for the maintenance of these tanks and bandharas for the year 1962—63?

A.—Sri ALUR HANUMANTHAPPA (Deputy Minister for Minor Irrigation).—

(*a*)

	Name of Taluk	Major Tanks	Minor Tanks	Bandharas
1	Haliyal ...	1	1353	Nil
2	Yallapur ...	Nil	246	388
3	Mundgod ...	Nil	326	8
4	Ankola ...	Nil	76	10

(*b*)

	Name of Taluk	Number of tanks requiring repairs
1	Haliyal ...	30 including 1 major tank
2	Yallapur ...	17 tanks and 1 bandhara
3	Mundgod ...	49
4	Ankola ...	Not assessed

(c)

	Amount allotted
	Rs.
Haliyal ...	60,400
Yellapur ...	25,500
Mundgod ...	53,100
Ankola ...	4,800

ಶ್ರೀ ಎಸ್. ಪಿ. ಫಾಯದೆ.—ಇಲ್ಲಿ ದುರಸ್ತಿಯಾಗಬೇಕೆಂದು ತೋರಿಸಿರತಕ್ಕ ಕೆರೆಗಳ ಏನಾ ಬಾಕಿ ಕೆರೆಗಳೆಲ್ಲ ಚೆನ್ನಾಗಿರುತ್ತವೆಯೆಂದು ಹೇಳುತ್ತೀರಾ?

† ಶ್ರೀ ಆಲೂರು ಹನುಮಂತಪ್ಪ.—ಸರ್ವೆ ಆದ ಹಾಗೆಲ್ಲ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳುತ್ತೇವೆ.

ಶ್ರೀ ಎಸ್. ಪಿ. ಫಾಯದೆ.—1959ರಲ್ಲಿ ಕೆರೆಗಳ ಸಪ್ತಾಹ ನಡೆಸಿದಾಗ ಇಷ್ಟೇ ಅರ್ಜಿಗಳು ಬಂದದ್ದು?

ಶ್ರೀ ಆಲೂರು ಹನುಮಂತಪ್ಪ.—ತಾಲ್ಲೂಕ್ ಬೋರ್ಡು ಮೆಂಬರುಗಳಿಂದಲೂ, ಶಾಸನಸಭಾ ಸದಸ್ಯರಿಂದಲೂ ಕೆರೆಗಳ ರಿಪೇರಿಗಾಗಿ ಅರ್ಜಿಗಳು ಬರುತ್ತಿವೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಇರತಕ್ಕ ಕೆರೆಗಳನ್ನೆಲ್ಲ ಸರ್ವೆಮಾಡಿ ರಿಪೇರಿಗೆ ಇರತಕ್ಕ ಕೆರೆಗಳನ್ನು ರೆಡಿಮಾಡಬೇಕೆಂದು ಆದೇಶ ಕೊಡಲಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈಗ ಬೆಂಗಳೂರು ಸುತ್ತಮುತ್ತ ಇರತಕ್ಕ ಕೆರೆಗಳನ್ನೆಲ್ಲ ಸರ್ವೆಮಾಡಿಸಿ ಒಂದು ಮಾಸ್ಟರ್ ಪ್ಲಾನ್ ತಯಾರುಮಾಡಿಸುತ್ತಿರುವಂತೆ ಬೇರೆ ಕಡೆಗಳಲ್ಲು ಮಾಸ್ಟರ್ ಪ್ಲಾನ್ ತಯಾರಿಸಲು ಏನು ಪ್ರಯತ್ನ ಮಾಡಿದ್ದೀರಿ?

ಶ್ರೀ ಆಲೂರು ಹನುಮಂತಪ್ಪ.—ಪ್ರತಿಯೊಂದು ಜಿಲ್ಲೆಯಲ್ಲೂ ಇಂಥ ಪ್ಲಾನ್ ತಯಾರಿಸಲು ಆದೇಶ ಕೊಡಲಾಗಿದೆ.

Supply of Disease-free Layings to Silkworm Rearers in the State.

*Q.—617. Sri T. MADIAH GOWDA (Ramanagaram).—

Will the Government be pleased to state:—

(a) what is the percentage of disease-free layings supplied to Silkworm Rearers in the current year in the State compared with last three years.

(b) what steps are taken by the Department to improve the supply of disease-free layings to Silkworm Rearers?

A.—Sri R. DAYANANDA SAGAR (Deputy Minister for Sericulture)

(a) Cent per cent during 1962-63

1959-60	1960-61	1961-62
66 per cent	73.4 per cent	95 per cent.

1962-63. = 100 per cent.